



ಮೂತ್ರ ಮಾಡಬೇಕೆನ್ನಿಸುವುದು, ಉರಿ ಮೂತ್ರ, ವಾಸನೆಯುಳ್ಳ ಮೂತ್ರ ವಿಸರ್ಜನೆಯಾಗುವುದರ ಜೊತೆಗೆ ಜ್ವರ, ಸುಸ್ತು ಇತ್ಯಾದಿ ತೊಂದರೆಗಳಾಗಬಹುದು ತಕ್ಷಣವೇ ಆಂಟಿಬಯಾಟಿಕ್ ಅನ್ನು ಪ್ರಾರಂಭಿಸಿ ಕಲ್ಚರ್ ವರದಿಯ ನಂತರ 7–10 ದಿನಗಳವರೆಗೆ ಮುಂದುವರಿಸಬಹುದು. ಮತ್ತೆ ಕಲ್ಚರ್ ಟೆಸ್ಟ್ ಮಾಡಿಸಿ ನೆಗೆಟಿವ್ ಬರಬೇಕು.

## ಮೂತ್ರಪಿಂಡದ ಸೋಂಕು

ಸೋಂಕು ಹೆಚ್ಚಾದಾಗ ಅದು ಮೂತ್ರ ಪಿಂಡದವರೆಗೂ ಹರಡಿ ಅಲ್ಲಿಯ ಎಲ್ಲಾ ಜೀವಕೋಶಗಳೂ ಸೋಂಕಾದರೆ ಅದನ್ನು ಪೈಲೋನೆಫ್ರೈಟಿಸ್ ಅನ್ನುತ್ತಾರೆ. ಚಳಿ, ಜ್ವರ, ಪಾರ್ಶ್ವದಲ್ಲಿ ನೋವು, ವಾಂತಿ ಇವೆಲ್ಲಾ ಆಗಬಹುದು. ತಾಯಿ ಹಾಗೂ ಗರ್ಭಸ್ಥ ಶಿಶುವಿನ ಹೃದಯಬಡಿತವೂ ಹೆಚ್ಚಾಗಬಹುದು.

ಚಿಕಿತ್ಸೆಗಾಗಿ ಗರ್ಭಿಣಿಯರು ಆಸ್ಪತ್ರೆಗೆ ದಾಖಲಿಸಿ ಸೂಕ್ತ ಆಂಟಿಬಯಾಟಿಕ್ ಚಿಕಿತ್ಸೆಯನ್ನು ನಂತರ ಕಲ್ಚರ್ ವರದಿಯ ಪ್ರಕಾರ ಚಿಕಿತ್ಸೆಯನ್ನು ಕನಿಷ್ಠ 10 ದಿನ ಮುಂದುವರಿಸಬೇಕಾಗುತ್ತದೆ. (ಕೆಲವು ಬಾರಿ 23 ವಾರಗಳವರೆಗೂ) ಜ್ವರದ ನಿಯಂತ್ರಣ, ಸೂಕ್ತ ದ್ರವಾಹಾರ ಪೂರೈಕೆ ಅತ್ಯಗತ್ಯ. ಅಕಾಲಿಕ ಹೆರಿಗೆ ಪ್ರಾರಂಭವಾದರೆ ಸ್ಟಿರಾಯ್ಡ್ ಜೊತೆಗೆ, ಹೆರಿಗೆ ನೋವು ತಡೆಗಟ್ಟುವ ಕ್ರಿಯೆ ಆಗಬಹುದು.

ಕೆಲವೊಮ್ಮೆ ಏನೂ ತೊಂದರೆ ಇರದಿದ್ದರೂ ಮೂತ್ರ ಸಂಬಂಧಿ ಸೋಂಕಿನಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಉರಿಮೂತ್ರ, ಪದೇ ಪದೇ ಮೂತ್ರ ವಿಸರ್ಜನೆ, ಮೂತ್ರಚೀಲ ಬರಿದಾಗದ ಹಾಗಿನ ಅನುಭವ, ವಾಸನೆಯುಳ್ಳ ಮೂತ್ರ ವಿಸರ್ಜನೆ, ಕೆಳಹೊಟ್ಟೆ ನೋವು, ಪಾರ್ಶ್ವನೋವು ಇವೆಲ್ಲಾ ಮಾತ್ರ ಸಂಬಂಧಿ ಸೋಂಕಿರಬಹುದು ಎಂದು ಗರ್ಭಿಣಿಯರಿಗೆ ತಿಳಿದಿರಬೇಕು. ಜೊತೆಗೆ ಸೂಕ್ತ ವೈದ್ಯಕೀಯ ಮಾಹಿತಿ, ಸಲಹೆ, ನೆರವನ್ನು ತಜ್ಞವೈದ್ಯರಿಂದ ಪಡೆಯಬಹುದು. ವೈದ್ಯರು ರೋಗಿಗೆ ಯು.ಟಿ.ಐ ತೊಂದರೆಗಳಾದ ಅಕಾಲಿಕ ಹೆರಿಗೆ ಮತ್ತು ಅದರಿಂದಾಗುವ ತೊಂದರೆಗಳು, ಸೋಂಕು ಗರ್ಭಕೋಶಕ್ಕೂ ಹರಡುವ ಸಂಭವ ಎಲ್ಲದರ ಬಗ್ಗೆ ಸೂಕ್ತ ಮಾಹಿತಿ ನೀಡಬೇಕು.

ಸೂಕ್ತ ಆಂಟಿಯಬಾಟಿಕ್ ಚಿಕಿತ್ಸೆ ವೈದ್ಯರ ಸಲಹೆಯ ಮೇರೆಗೆ ಪೂರ್ತಿಯಾಗಿ (8–10 ದಿನಗಳು) ತೆಗೆದುಕೊಂದು ಸೋಂಕು ಮರುಕಳಿಸಿದಂತೆ ನೋಡಿಕೊಳ್ಳಬಹುದು.

## ಸೂಕ್ತ ಮುನ್ನೆಚ್ಚರಿಕೆಗಳು

ಗರ್ಭಧಾರಣೆಗೂ ಮುನ್ನವೇ ಯು.ಟಿ.ಐ ನ ರೋಗಲಕ್ಷಣಗಳಿದ್ದರೆ ಗುರುತಿಸಿ ಸೂಕ್ತ ಚಿಕಿತ್ಸೆ ಪಡೆಯಬೇಕು.

ದಿನಾಲು ಕನಿಷ್ಠ 3–4 ಲೀಟರ್ ನೀರು ಹಾಗೂ ದ್ರವ ಆಹಾರ ಸೇವಿಸಿರಿ (ಕೃತಕ ಪೇಯಗಳು, ಕಾಫಿ, ಟೀ ಹೆಚ್ಚಿಗೆ ಬೇಡ)

## ಹೊರಜನಾಂಗಗಳ ಸ್ವಚ್ಛತೆ ಕಾಪಾಡಿ

ಕಲ್ಚರ್ ಟೆಸ್ಟ್ ಮಾಡಿಸಿ (ತಳಿ ಪರೀಕ್ಷೆ) ಅಂದರೆ ರೋಗಾಣುಗಳ ತಳಿ ಎಬ್ಬಿಸಿ ಯಾವ ರೋಗಾಣುಗಳು ಬೆಳವಣಿಗೆ ಹೊಂದುತ್ತಿವೆ ಎಂದು ತಿಳಿದು ಅದು ಯಾವ ಔಷಧಕ್ಕೆ ಬಗ್ಗುತ್ತದೆ ಎನ್ನುವ ವರದಿ 48 ಗಂಟೆಯೊಳಗಾಗಿ ಬರುತ್ತದೆ. ಆ ವರದಿಯ ಪ್ರಕಾರ ಸೂಕ್ತ ಆಂಟಿಬಯಾಟಿಕ್ ಔಷಧಿಯನ್ನು ಗರ್ಭಸ್ಥ ಶಿಶುವನ್ನು ಲಕ್ಷ್ಯದಲ್ಲಿಟ್ಟುಕೊಳ್ಳುವುದು ಅದಕ್ಕೆ ತೊಂದರೆಯನ್ನುಂಟು ಮಾಡದಂತ ಆಂಟಿಬಯಾಟಿಕನ್ನು ಸಂಪೂರ್ಣ 7–10 ದಿನ ತೆಗೆದುಕೊಳ್ಳಬೇಕು. ಮತ್ತೆ ಪರೀಕ್ಷಿಸಿ ಸೋಂಕಿಲ್ಲವೆಂದು ಖಾತ್ರಿ ಮಾಡಿಕೊಳ್ಳಿ. ಇಲ್ಲದಿದ್ದರೆ ಸೋಂಕು ಮರುಕಳಿಸುವಂತಾಗಿ ತೊಂದರೆ ಉಂಟಾಗುತ್ತದೆ.

ಪದೇ ಪದೇ ಸೋಂಕಾಗುವ ಸಂಭವ ಶೇ.34 ರಷ್ಟು, ಆಗ ಮೂತ್ರಾಂಗಗಳಲ್ಲಿ ಕಲ್ಲುಗಳಿಲ್ಲವೆಂದು ಖಾತ್ರಿಪಡಿಸಿಕೊಳ್ಳಿ.

ಒಟ್ಟಾರೆ ಗರ್ಭಧಾರಣೆಯಲ್ಲಿ ತೊಂದರೆಯಾಗದಿದ್ದ ಹಾಗೇ ಯು.ಟಿ.ಐ ನಿರ್ವಹಣೆ ಮಾಡುವುದು ತಾಯಿ ಹಾಗೂ ಮಗುವಿಬ್ಬರಿಗೂ ಸೂಕ್ತ.